# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 14 Reg. No. : KARBIL / 2005 / 16123 ಫೆಬ್ರವರಿ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 02 ಪ್ರಕಟಣೆ : 22-02-2025


## ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್ – 'ಕಂಪ್ಯೂಟರ್ ಶಿಕ್ಷಣ ವಿದ್ಯಾನಿಧಿ'



ಚಿತ್ರ : ಶ್ರೀ ರಘುವೀರ್ ಪೆರ್ಡೂರು

ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲ ಪ್ರಭಾಕರ್ ಅವರು ಕಂಪ್ಯೂಟರ್ ಕಲಿಯುವ ವಿದ್ಯಾರ್ಥಿಗಳಿಗೆ ಸಹಾಯವಾಗಲು ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್ ಮುಖಾಂತರ ಮೂಲನಿಧಿಯಾಗಿ ರೂ. **1,10,000/-** (ರೂಪ್ಯಾ ಒಂದು ಲಕ್ಷದ ಹತ್ತು ಸಾವಿರ) ದೇಣಿಗೆ ನೀಡಿ 'ಕಂಪ್ಯೂಟರ್ ಶಿಕ್ಷಣ ವಿದ್ಯಾನಿಧಿ'ಯನ್ನು ಸ್ಥಾಪಿಸಿದ್ದಾರೆ. ಈ ನಿಧಿಯ ಮೊತ್ತವನ್ನು ಆಸಕ್ತ ಸಮಾಜ ಬಾಂಧವರ ದೇಣಿಗೆಯಿಂದ ಕನಿಷ್ಠ ರೂ. **10,00,000/-** (ರೂಪ್ಯಾ ಹತ್ತು ಲಕ್ಷ)ಕ್ಕೆ ಹೆಚ್ಚಿಸುವ ಉದ್ದೇಶಿಸಲಾಗಿದ್ದು ಇಂತಹ ಸಮಾಜಮುಖೀ ಕಾರ್ಯಕ್ಕೆ ಡಾ| ಜಯಲಕ್ಷ್ಮಿಯವರು ರೂ. **10,000** (ರೂಪ್ಯಾ ಹತ್ತು ಸಾವಿರ) ದೇಣಿಗೆ ನೀಡಿದ್ದಾರೆ. ಶ್ರೀ ಸಭಾದ 'ಸ್ಕೋಲರ್ಸ್ ಡೇ' ದಿನ ಬೆಂಗಳೂರು ನಿವಾಸಿ ಸಾಂತೂರು ಶ್ರೀ ಭಾಗ್ಯಚಂದ್ರ ರಾವ್ (ಶ್ರೀ ಬಿ. ಸಿ. ರಾವ್) ಇವರು ರೂಪ್ಯಾ **1,00,000/-** ರೂಪ್ಯಾ ಒಂದು ಲಕ್ಷ ದೇಣಿಗೆ ನೀಡಿದ್ದಾರೆ. ಬಾಕಿ ಉಳಿದ ಮೊತ್ತ **7.80** ಲಕ್ಷ (ರೂಪ್ಯಾ ಏಳು ಲಕ್ಷದ ಎಂಬತ್ತು ಸಾವಿರ). ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಕೃತಜ್ಞತೆಗಳು.

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ಮಂಗಳೂರು ನಿವಾಸಿ ಉಜ್ಜೋಡಿ ಶ್ರೀ ರವಿಶಂಕರ್ ರಾವ್ ಹಾಗೂ ಶ್ರೀಮತಿ ವಿಜಯಲಕ್ಷ್ಮೀ ರಾವ್ ಇವರು, ತಮ್ಮ ಪುತ್ರ ಶ್ರೀ ರಂಜನ್ ರಾವ್, ಸೊಸೆ ಶ್ರೀಮತಿ ಸುಷ್ಮಾ ರಾವ್ ಇವರ ಸೀಮಂತ ಸಮಾರಂಭದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. **50,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಮಂಗಳೂರು ನಿವಾಸಿ ದಿ| ರಾಘವ ಶರ್ಮ ಮತ್ತು ದಿ| ಕಿಶೋರಿ ಶರ್ಮ ಇವರ ಸ್ಮರಣಾರ್ಥ ಪುತ್ರ ಬೆಂಗಳೂರು ನಿವಾಸಿ ಶ್ರೀ ಮುರಲಿಕೃಷ್ಣ ಶರ್ಮ ಮತ್ತು ಸೊಸೆ ಶ್ರೀಮತಿ ಪೂರ್ಣಿಮಾ ಶರ್ಮರವರು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. **10,000/-** ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



## ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್, ಶಿವಸದನ, ಮುರ, ಪುತ್ತೂರು, ದ. ಕ.

### ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿ ನಿಲಯ

### ಮೇಲಿನ ಅಂತಸ್ತಿನ ಉದ್ಘಾಟನೆ

ದಿನಾಂಕ : 01-03-2025ನೇ ಶನಿವಾರ ಸಂಜೆ ಗಂಟೆ 4-00ಕ್ಕೆ

**ಕಾರ್ಯಕ್ರಮಗಳು**

ಸಂಜೆ ಗಂಟೆ 3-00ರಿಂದ : **ಭಜನಾ ಕಾರ್ಯಕ್ರಮ**
ಮಿತ್ರ ಸಮಾಜ ಮಹಿಳಾ ಭಜನಾ ಮಂಡಳಿಯ ಸದಸ್ಯರಿಂದ
ಸಂಜೆ ಗಂಟೆ 4-00ರಿಂದ : **ಉದ್ಘಾಟನಾ ಕಾರ್ಯಕ್ರಮ**

ಉದ್ಘಾಟಕರು : ಶ್ರೀ ನಿಶಾಂತ್ ರಾವ್, ನಿರ್ದೇಶಕರು, IQVIA
ಅಭ್ಯಾಗತರು : ಶ್ರೀ ಸುರೇಶ್ ಕುಮಾರ್, ನಿರ್ದೇಶಕರು, IQVIA
ಶ್ರೀ ಸ್ವಾಮಿ ರುದ್ರ, ಹಿರಿಯ ವ್ಯವಸ್ಥಾಪಕರು, IQVIA
ಶ್ರೀ ರಂಜನ್ ಬೆಳ್ಳರ್ಪಾಡಿ, ರಾಮಕೃಷ್ಣ ಮಠ, ಮಂಗಳೂರು

ತಾವೆಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ನಮ್ಮನ್ನು ಈ ಸಮಾಜಸೇವಾ ಕಾರ್ಯದಲ್ಲಿ ಬೆಂಬಲಿಸಬೇಕಾಗಿ ವಿನಂತಿ.

**ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರು**
ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್, ಮಂಗಳೂರು

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696
ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618
ಸಂಪಾದಕ ಮಂಡಳಿ :
• ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು
• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ
ಆರ್ಥಿಕ ಸಲಹಾ ಸಮಿತಿ : • ಉದಯ ಕುಮಾರ್ ಪಿ.
• ಸಂತೋಷ್ ಕುಮಾರ್ ಯು. • ಅನಿಲ್ ರಾವ್ ಬಿ. ಎಸ್.
ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್
ಪ್ರಕಾಶಕರು : ಡಾ. ಎ. ಪಿ. ಕೃಷ್ಣ
: 7795116598 ✆ : 9343361618 e-mail : jnanashakthisss@gmail.com

## ಶ್ರೀ ಉಮಾಕಾಂತ ಶರ್ಮ ಇವರಿಂದ
### ರೂ. 1,00,000/-ದ ಸಾಲ ವಿದ್ಯಾರ್ಥಿವೇತನ ನಿಧಿ ಕೊಡುಗೆ




ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಹಲವಾರು ವರ್ಷಗಳ ಕಾಲ ಮ್ಯಾನೇಜರ್ ಆಗಿ ಪ್ರಾಮಾಣಿಕ, ನಿಷ್ಠೆಯಿಂದ ಸೇವೆಸಲ್ಲಿಸಿದ್ದ ಶ್ರೀ ಎ. ಪಿ. ಉಮಾಕಾಂತ ಶರ್ಮರಿಗೆ ಅವರ ಶ್ರಮ, ಸೇವಾ ಮನೋಭಾವ ಗುರುತಿಸಿ, ಶ್ರೀ ಸುಬ್ರಹ್ಮಣ್ಯ ಸಭಾದಿಂದ ಗ್ರಾಚ್ಯುವಿಟಿ ನೀಡಲಾಗಿದ್ದು, ಈ ಮೊಬಲಗನ್ನು ಅವರು ತಮ್ಮ ಪತ್ನಿ ಶ್ರೀಮತಿ ಕಸ್ತೂರಿ ಉಮಾಕಾಂತ ಶರ್ಮ ಸ್ಮರಣಾರ್ಥ ರೂ. 1,00,000/- (ರೂಪ್ಯಾ ಒಂದು ಲಕ್ಷ)ದ ಸಾಲ ವಿದ್ಯಾರ್ಥಿವೇತನ ನಿಧಿಯನ್ನು ಶ್ರೀ ಸಭಾದಲ್ಲಿ ಸ್ಥಾಪಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ಹಾರ್ದಿಕ ವಂದನೆಗಳು. ಅವರ ನಿವೃತ್ತಿ ಜೀವನ ಆರೋಗ್ಯ ಮತ್ತು ನೆಮ್ಮದಿಯಿಂದ ಕೂಡಿರಲಿ ಎಂಬುದು ಶ್ರೀ ಸಭಾದ ಹಾರೈಕೆ.

## ಪುತ್ತೂರಿನಲ್ಲಿ ಸುಸಜ್ಜಿತ 'ಶಿವಸದನ'
### ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 45ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ 7-00ರಿಂದ ಸಂಜೆ 7-00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

**ಹೆಚ್ಚಿನ ಮಾಹಿತಿ :** ಶ್ರೀ ಕರುಣ್ ರಾವ್ ಬೆಳ್ಳೆ – 7337634359
ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442
ಶ್ರೀ ಪಿ. ಶ್ರೀಕಾಂತ್ ರಾವ್ – 7795116598

# ಅನುಗ್ರಹ ಸಂದೇಶ



ಈಶ್ವರನ ಸೃಷ್ಟಿಶಕ್ತಿಯ ಮೂಲಕವಾಗಿ, ಮಾಯೆಯ ಆದೇಶಾನುಸಾರವಾಗಿ, ಪ್ರಪಂಚದ ಸೃಷ್ಟಿ ಮತ್ತು ನಾಶವು ಒಂದು ಅದ್ಭುತಲೀಲೆಯಾಗಿದೆ.

ಇಹ ಮತ್ತು ಪರಲೋಕಗಳಲ್ಲಿ ಸುಖ-ಸಂತೋಷಗಳನ್ನು ಅನುಭವಿಸುವ ಇಚ್ಛೆಯುಳ್ಳವರಿಗಾಗಿ ಅನೇಕ ಸತ್ಕಾರ್ಯಗಳನ್ನು ಆಚರಿಸಬೇಕೆಂದು ಶಾಸ್ತ್ರಗಳು ವಿಧಿಸುತ್ತವೆ. ಅದೇ ರೀತಿಯಲ್ಲಿ ಕಷ್ಟ ಮತ್ತು ನೋವು ಅನುಭವಿಸಬಾರದು ಎಂದಾದರೆ, ಕೆಟ್ಟದಾದ ಆಲೋಚನೆಗಳಿಂದ ಸಂಭವಿಸಬಹುದಾದ ದುಷ್ಪರಿಣಾಮಗಳನ್ನು ಕುರಿತು ಎಚ್ಚರಿಸುತ್ತವೆ.

ಆದರೆ, ತನಗೆ ಬೇಕಾದುದನ್ನು ಪಡೆಯುವ ಇಲ್ಲವೇ ತನ್ನನ್ನು ಕಷ್ಟಕ್ಕೆ ಈಡು ಮಾಡುವ ವಿಷಯಗಳಿಂದ ತಪ್ಪಿಸಿಕೊಳ್ಳಲು ಮಾನವನಿಗೆ ಸಾಧ್ಯವಿಲ್ಲ, ಈ ವಿಚಾರವಾಗಿ,

***ನ ಹ್ಯತ್ರ ಸಂಸಾರ-ಪಥೇ ನರಾಣಾಂ ಸ್ವೇಚ್ಛಾ-ವಿಧೇಯೋಽಭಿಮತೇನ ಯೋಗಃ ।***
ಎಂದು ಹೇಳಲಾಗಿದೆ.

ಪ್ರಪಂಚದಲ್ಲಿ ಮನುಷ್ಯನು ತಾನು ಇಚ್ಛಿಸಿದ್ದನ್ನೆಲ್ಲಾ ಪಡೆಯುವುದು ಕಷ್ಟ. ಒಂದು ಇಚ್ಛೆಯು ಪೂರ್ಣವಾದರೂ, ಅದನ್ನು ಅನುಸರಿಸಿ ಒಂದರ ಹಿಂದೆ ಒಂದರಂತೆ ಆಸೆಗಳು ಉದ್ಭವಿಸುತ್ತಲೇ ಇರುತ್ತವೆ. ಆಸೆಗಳಿಗೆ ಕೊನೆಮೊದಲೇ ಇಲ್ಲವಾದ್ದರಿಂದ ಈ ಸರಣಿಗೆ ಮುಕ್ತಾಯವೂ ಇಲ್ಲ.

ಶ್ರುತಿಯು ***'ಸಮುದ್ರ ಇವ ಹಿ ಕಾಮಃ । ನೈವ ಹಿ ಕಾಮಸ್ಯಾನ್ತೋಽಸ್ತಿ । ನ ಸಮುದ್ರಸ್ಯ*** ಎಂದು ಉದ್ಧರಿಸಿದೆ ! ಇದರ ಅರ್ಥ 'ಆಸೆಗಳು ಸಮುದ್ರದಂತೆ, ಸಮುದ್ರವು ಹೇಗೆ ಅಪಾರವಾದುದೋ ಅದೇ ರೀತಿ ಆಸೆಗಳಿಗೂ ಅಂತ್ಯವಿಲ್ಲ'

ಆದ್ದರಿಂದ ತನ್ನ ಸಂತೋಷಕ್ಕಾಗಿ ಆಸೆಗಳನ್ನು ತೃಪ್ತಿಪಡಿಸಲು ಪ್ರಯತ್ನಿಸಿದರೆ, ಮನುಷ್ಯನು ಸಂದರ್ಭಗಳಿಗೆ ಗುಲಾಮನಾಗುತ್ತಾನೆ. ಇದರಿಂದ ಅವನು ಸುಖ-ಸಂತೋಷಗಳನ್ನು ಅನುಭವಿಸುವುದಿಲ್ಲ.

***'ಸರ್ವ-ಸಂಸಾರ-ದೋಷಾಣಾಂ ತೃಷ್ಣೈಕಾ ದೀರ್ಘ-ದುಃಖದಾ ।***

ಪ್ರಪಂಚದಲ್ಲಿರುವ ಎಲ್ಲಾ ದುರಾದೃಷ್ಟ ಸಂಗತಿಗಳಲ್ಲಿ, ಆಸೆಯು ಮನುಷ್ಯನಲ್ಲಿ ಕೊನೆಯಿಲ್ಲದ ಸಂಕಟಗಳಿಗೆ ಈಡು ಮಾಡುತ್ತದೆ.

ಸಂತೋಷವೆಂಬುದು ಇಂದ್ರಿಯಗಳಿಂದಲೇ ಸಿಗುವುದಿಲ್ಲ ಎಂಬ ವಿವೇಕವು ಉದಯಿಸಿದಾಗ ಮನುಷ್ಯನು ರಾಗದ್ವೇಷಗಳಿಂದ ಮುಕ್ತನಾಗುತ್ತಾನೆ. ಇದರಿಂದ ಮನಸ್ಸು ಶಾಂತವೂ ನಿಶ್ಚಲವೂ ಆಗುತ್ತದೆ.

ನಿಜವಾದ ಸುಖ ಹಾಗೂ ಶಾಂತಿಯು ಪ್ರತಿಯೊಬ್ಬರಲ್ಲಿಯೂ ಇದೆ ಎಂದು ಶಾಸ್ತ್ರಗಳು ಘೋಷಿಸಿವೆ. ಪ್ರಪಂಚದ ವ್ಯವಹಾರದ ಮಧ್ಯೆ ಆಧ್ಯಾತ್ಮಿಕ – ಶ್ರೇಯೋ – ಮಾರ್ಗವನ್ನು ಯಾರೂ ತ್ಯಜಿಸಬಾರದು.

ಕರ್ಮಫಲದಾತನಾದ ಪರಮಾತ್ಮನನ್ನು ಮರೆತು, ಕೇವಲ ಪ್ರಾಪಂಚಿಕ ವ್ಯವಹಾರಗಳಲ್ಲಿ ಮತ್ತು ಇಂದ್ರಿಯ ಸುಖಗಳಲ್ಲಿ ಮೈಮರೆತವನಿಗೆ ಕಷ್ಟಗಳು ಪ್ರಾರಂಭವಾಗುತ್ತವೆ. ಆದ್ದರಿಂದ, ಎಲ್ಲ ಬಂಧನಗಳಿಂದ ಮುಕ್ತಗೊಳಿಸಿ, ಶಾಂತಿಯನ್ನು ನೀಡುವ ಜ್ಞಾನವನ್ನು ಸಂಪಾದಿಸಲು ಮನುಷ್ಯನು ಪ್ರಯತ್ನಿಸಬೇಕು.

***ಸದಾ ಸಂತುಷ್ಟ – ಮನಸಃ ಸರ್ವಾಃ ಸುಖಮಯಾ ದಿಶಃ ।***
***ಶರ್ಕರಾಕಂಟಕಾದಿಭ್ಯೋ ಯಥೋಪಾನತ್ಪದಃ ಶಿವಮ್ ॥***

ಪಾದರಕ್ಷೆಗಳನ್ನು ಧರಿಸಿದವನಿಗೆ ಕಲ್ಲುಮುಳ್ಳುಗಳಿಂದ ತೊಂದರೆಯಾಗುವುದಿಲ್ಲ. ಅದರಂತೆ, ಅಂತರಂಗದ ಶಾಂತಿಯನ್ನು ಕಂಡುಕೊಂಡವನಿಗೆ ಎಲ್ಲಾ ಸಂದರ್ಭಗಳಲ್ಲೂ ಶಾಂತಿ, ಸಂತೋಷಗಳೇ ಅನುಭವಕ್ಕೆ ಬರುತ್ತವೆ.

ಇದು ಸಾಧ್ಯವಾಗಬೇಕಾದರೆ ಮುಮುಕ್ಷುವು ವಿವೇಕ, ವೈರಾಗ್ಯ, ವಿಚಾರ ಮತ್ತು ಧ್ಯಾನ – ಇವುಗಳನ್ನು ಅಭ್ಯಾಸ ಮಾಡಿಕೊಳ್ಳಬೇಕು. ಇದರಿಂದ ಮನಸ್ಸಿಗೆ ಶಾಂತಿ ಲಭಿಸುವುದಲ್ಲದೇ ಎಲ್ಲಾ ರೀತಿಯ ಬಂಧನಗಳಿಂದ ಮುಕ್ತರಾಗಬಹುದು. ಈಶ್ವರನಲ್ಲಿ ಅಚಲವಾದ ಭಕ್ತಿಯಿಂದ ಮಾತ್ರ ಇದು ಸಾಧ್ಯವಾಗುತ್ತದೆ ಎಂದು ಪರಮಾತ್ಮನು ಭಗವದ್ಗೀತೆಯಲ್ಲಿ ತಿಳಿಸಿರುತ್ತಾನೆ.

***ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಚ ಸೇವತೇ ।***
***ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥***

*ಕನ್ನಡ ಅನುವಾದ : ಶ್ರೀ ಜಿ. ವಿಜಯಕುಮಾರ್ ಮೊಬೈಲ್ : 9448114410*

PREETHIKA AUTOMOBILES
✆ 2493633 9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils

# ಇನ್ನಾ ಚಂದ್ರಕಾಂತ ರಾವ್ ಸ್ವತಂತ್ರ ನಿರ್ದೇಶಕ



ಅದ್ವೈತ ಭಾರತೀಯ ಕಮ್ಯೂನಿಟಿ ಡೆವಲಪ್‌ಮೆಂಟ್ ಆ್ಯಂಡ್ ಎಜುಕೇಶನ್ ಟ್ರಸ್ಟ್‌ನ ಮುಖ್ಯಸ್ಥ, ಪ್ರಗತಿಪರ ಕೃಷಿಕರೂ ಆಗಿರುವ ಇನ್ನಾ ಚಂದ್ರಕಾಂತ ರಾವ್ ಇದೀಗ ಕಾರ್ಪೊರೇಟ್ ಕಂಪೆನಿಗಳ ಸ್ವತಂತ್ರ ನಿರ್ದೇಶಕರಾಗುವ ಅರ್ಹತೆ ಪಡೆದಿದ್ದಾರೆ.

ಕೇಂದ್ರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ನಡೆಸಿರುವ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಶ್ರೀ ಚಂದ್ರಕಾಂತ ರಾವ್, ತನ್ಮೂಲಕ ಕಾರ್ಪೊರೇಟ್ ಕಂಪೆನಿಗಳ ಸ್ವತಂತ್ರ ನಿರ್ದೇಶಕರಾಗುವ ಅರ್ಹತೆ ಪಡೆದುಕೊಂಡಿದ್ದಾರೆ.

ಸುರತ್ಕಲ್ ಎನ್‌ಐಟಿಕೆಯಲ್ಲಿ ವ್ಯಾಸಂಗ ನಡೆಸಿರುವ ಶ್ರೀ ಚಂದ್ರಕಾಂತ ರಾವ್, ಅತ್ಯುತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿ, ಇಂಟರ್‌ನ್ಯಾಷನಲ್ ಮ್ಯಾನೇಜ್‌ಮೆಂಟ್ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಪ್ರತಿಷ್ಠಿತ ಕಂಪೆನಿಗಳಲ್ಲಿ ಉನ್ನತ ಹುದ್ದೆಯಲ್ಲಿದ್ದವರು. ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ದಾಖಲಿಸಿದವರು. ಹುಟ್ಟೂರಾದ ಕಾರ್ಕಳ ತಾಲೂಕಿನ ಇನ್ನಾದಲ್ಲಿ ಕೃಷಿ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾರೆ. ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಕ್ಷೇತ್ರಗಳಲ್ಲೂ ಸಕ್ರಿಯರಾಗಿದ್ದಾರೆ.

ಶ್ರೀ ಇನ್ನಾ ಚಂದ್ರಕಾಂತ ರಾವ್ ನಿರಂತರ ದುಡಿಮೆಯಿಂದಲೇ ಯಶಸ್ಸು ಗಳಿಸಿದವರು. ಏನನ್ನಾದರೂ ಸಾಧಿಸಬೇಕೆಂಬ ಹಠ, ಸಾಧಿಸುತ್ತೇನೆ ಎಂಬ ವಿಶ್ವಾಸ, ನಿರಂತರ ಹೊಸತನದ ಹುಡುಕಾಟ ಅವರನ್ನು ಇಂದು ಸಾಮಾಜಿಕ ಜೀವನದಲ್ಲಿ ಗುರುತಿಸುವಂತೆ ಮಾಡಿದೆ. ಇವರು ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತ ಮಂಡಳಿಯ ಸಭೆ ಮಹಿಳಾ ಮಂಡಳಿಯ ಪದಾಧಿಕಾರಿಗಳ ಆಯ್ಕೆ



ದಿನಾಂಕ 15–02–2025ರಂದು ನಡೆದ, ಸುಬ್ರಹ್ಮಣ್ಯ ಸಭಾದ ಮಹಿಳಾ ಸದಸ್ಯರ ಸಭೆಯಲ್ಲಿ 2025–2028ರ ಮಹಿಳಾ ವೇದಿಕೆಗೆ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಿದರು. ತದನಂತರ ನಡೆದ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತ ಮಂಡಳಿಯ ಸಭೆಯಲ್ಲಿ ಪದಾಧಿಕಾರಿಗಳ ಹೆಸರನ್ನು ಘೋಷಿಸಲಾಯಿತು.

ಮಹಿಳಾ ಮಂಡಳಿಯ ಹೊಸ ಪದಾಧಿಕಾರಿಗಳ ವಿವರ :

ಅಧ್ಯಕ್ಷೆ : **ಶ್ರೀಮತಿ ಜಯಂತಿ ವಿನೋದ್ ರಾವ್**
ಉಪಾಧ್ಯಕ್ಷೆ : **ಶ್ರೀಮತಿ ವೀಣಾ ರಾಮಮೋಹನ್ ಬೆಳ್ಳೆ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್**
ಕಾರ್ಯದರ್ಶಿ : **ಶ್ರೀಮತಿ ಶಕುಂತಲಾ ವಿಜಯಕುಮಾರ್**
ಜೊತೆ ಕಾರ್ಯದರ್ಶಿ : **ಶ್ರೀಮತಿ ಅಕ್ಷತಾ ಮನೀಶ್ ಮತ್ತು**
**ಶ್ರೀಮತಿ ಶುಭಲಕ್ಷ್ಮೀ ರವಿಕಿರಣ್**

ಹೊಸದಾಗಿ ಆಯ್ಕೆಗೊಂಡ ಎಲ್ಲಾ ಪದಾಧಿಕಾರಿಗಳಿಗೆ ಸುಬ್ರಹ್ಮಣ್ಯ ಸಭಾದ ಆಡಳಿತ ಮಂಡಳಿಯ ವತಿಯಿಂದ ಅಭಿನಂದನೆಗಳು.

**ಅಧ್ಯಕ್ಷರು, ಸುಬ್ರಹ್ಮಣ್ಯ ಸಭಾ, ಮಂಗಳೂರು**

*Prop. : P. Srikanth Rao* Mobile : 9343361618

**M/s. SAMARPAN**

*HOUSE OF STATIONERY*

"Vijaya Nivas", Opp. Pio Mall
Bejai Church Road, Mangalore - 4



## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003

**ಶಾಖೆಗಳು** ✆ : 9880968032 / 0824-2982095

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು
ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ
✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575
ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967
ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ
✆ : 9741443470
ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು
✆ : 9740925733
ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು
✆ : 9945916755

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | |
|---|---|
| 45 ದಿನಗಳಿಂದ 180 ದಿನಗಳ ವರೆಗೆ | - 5% |
| 181 ದಿನಗಳಿಂದ 364 ದಿನಗಳ ವರೆಗೆ | - 6% |
| 1 ವರ್ಷದಿಂದ 3 ವರ್ಷದ ವರೆಗೆ | - 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**
ಕನಿಷ್ಠ ಠೇವಣಿ : ರೂ. **10,000/-** ಠೇವಣಿ ಅವಧಿ : **88** ತಿಂಗಳು
ವಿಶೇಷ ಬಡ್ಡಿದರ : **9.6%**

ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್** ಹಾಗೂ
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**

ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

## ಬ್ರಹ್ಮೋಪದೇಶ

ಶ್ರೀಮತಿ ಸರಯೂ ಹಾಗೂ ಶ್ರೀ ಪ್ರೀತಮ್ ಶರ್ಮ ಇವರ ಸುಪುತ್ರ **ಚಿ| ಅಮೋಘರಾಜ್**ನ ಉಪನಯನ ತಾ. 19–02–2025ನೇ ರವಿವಾರ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ ನಡೆಯಿತು.

❖❖❖❖

ಶ್ರೀಮತಿ ಪ್ರಿಯಾಂಕಾ ಹಾಗೂ ಶ್ರೀ ಸಂದೀಪ್ ಶಾನುಭೋಗ ಇವರ ಸುಪುತ್ರ **ಚಿ| ಸಂಪ್ರೀತ**ನ ಉಪನಯನ ತಾ. 19–01–2025ನೇ ರವಿವಾರ 'ಶ್ರೀ ವಿಷ್ಣುಮೂರ್ತಿ ದೇವಸ್ಥಾನ', ಕುಳಾಯಿಯಲ್ಲಿ ನಡೆಯಿತು.


❖❖❖❖

ಶ್ರೀಮತಿ ಅಂಜಲಿ ಹಾಗೂ ಶ್ರೀ ಅಜಿತ್ ರಾವ್ ಇವರ ಸುಪುತ್ರ **ಚಿ| ವಿಹಾರ**ನ ಉಪನಯನ ತಾ. 19–01–2025ನೇ ರವಿವಾರ ಉಡುಪಿಯ ಶಾರದಾ ಮಂಟಪದಲ್ಲಿ ನಡೆಯಿತು.

❖❖❖❖



ಶ್ರೀ ಸುಬ್ರಹ್ಮಣ್ಯ ರಾವ್ ಪಿ.ಎನ್. ಇವರ ಮೊಮ್ಮಗ ಶ್ರೀ ಸದಾನಂದ ರಾವ್ ಪಿ.ಎನ್. ಮತ್ತು ಶ್ರೀಮತಿ ಶಾರದಾ ಪಿ.ಎನ್. ಇವರ ಸುಪುತ್ರ **ಚಿ| ನಮಿತ ಪಿ.ಎನ್.** ಇವನ ಬ್ರಹ್ಮೋಪದೇಶ ಕಾರ್ಯಕ್ರಮವು ದಿನಾಂಕ 07–02–2025ನೇ ಶುಕ್ರವಾರ ಪೊಳಲಿಯ 'ಅಖಿಲೇಶ್ವರ ದೇವಸ್ಥಾನ'ದಲ್ಲಿ ಗುರುಹಿರಿಯರ ಸಮಕ್ಷಮದಲ್ಲಿ ನಡೆಯಿತು.




ಶ್ರೀ ದೇವಾನಂದ ಭಟ್ ಹಾಗೂ ಶ್ರೀಮತಿ ವೀಣಾ ಬೆಳುವಾಯಿ ಇವರ ಸುಪುತ್ರಿ **ಚಿ| ಸೌ| ಶುಭಾಂಜನ** ಮತ್ತು ಶ್ರೀ ಗಣೇಶ ಅಧಿಕಾರಿ ಹಾಗೂ ಶ್ರೀಮತಿ ಶೋಭಾ, ಮೈಸೂರು ಇವರ ಸುಪುತ್ರ **ಚಿ| ಸುಹಾಸ್** ಇವರ ವಿವಾಹವು ತಾ. 17–01–2024ನೇ ಶುಕ್ರವಾರ 'ಸ್ಕೌಟ್ & ಗೈಡ್ ಭವನ', ಮೂಡಬಿದಿರೆಯಲ್ಲಿ ನಡೆಯಿತು.

✽ ✽ ✽

ಶ್ರೀಮತಿ ರೇಣುಕಾ ಮತ್ತು ದಿ| ರಾಜೇಂದ್ರ ಶಾನುಭೋಗ ಇವರ ಪುತ್ರ **ಚಿ| ದೀಪಕ್** ಹಾಗೂ ಶ್ರೀಮತಿ ಶಾರದಾ ಎಸ್. ತಾವಡೆ ಮತ್ತು ಶ್ರೀ ಸತೀಶ್ ತಾವಡೆ ಇವರ ಪುತ್ರಿ **ಚಿ| ಸೌ| ರೇವತಿ** ಇವರ ವಿವಾಹವು ತಾ. 19–01–2025ನೇ ರವಿವಾರ ಸಾಂಗ್ಲಿಯಲ್ಲಿ ನಡೆಯಿತು.

✽ ✽ ✽

ಶ್ರೀಮತಿ ಇಂದಿರಾ ಮತ್ತು ಕೋಲ್ಪೆ ಲಕ್ಷ್ಮೀನಾರಾಯಣ ರಾವ್ ಇವರ ಪುತ್ರಿ **ಚಿ| ಸೌ| ವಸುಧಾ** ಹಾಗೂ ಶ್ರೀಮತಿ ಪೂರ್ಣಿಮಾ ಮತ್ತು ದಿ| ನಟರಾಜ್ ಇವರ ಪುತ್ರ **ಚಿ| ಶಶಾಂಕ್** ಇವರ ವಿವಾಹವು ತಾ. 2–02–2025ನೇ ರವಿವಾರ ಬೆಂಗಳೂರಿನ 'ಅಲ್ಲಮಪ್ರಭು ಆತ್ಮಜನ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

✽ ✽ ✽

ಶ್ರೀಮತಿ ರೇಖಾ ಮತ್ತು ಶ್ರೀ ಕಾಳಿಂಗ ರಾವ್ ಇವರ ಪುತ್ರ **ಚಿ| ರಕ್ಷಿತ ರಾವ್** ಹಾಗೂ ಶ್ರೀಮತಿ ಮತ್ತು ಶ್ರೀ ಅನಂತ ಕೆ. ಜೆ. ಇವರ ಪುತ್ರಿ **ಚಿ| ಸೌ| ಅರ್ಪಿತಾ** ಇವರ ವಿವಾಹವು ತಾ. 24–01–2025ನೇ ಶುಕ್ರವಾರ ಉಡುಪಿಯ 'ಸರಸ್ವತಿ ಸಭಾಭವನ'ದಲ್ಲಿ ನಡೆಯಿತು.








## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ದಿ| ಕೂಡ್ಲು ನಾರಾಯಣ ಶಾನುಭೋಗ ಅವರ ಧರ್ಮಪತ್ನಿ **ಚಂದ್ರಾವತಿ ಶಾನುಭೋಗ** ಅವರು ತಾ. 26–1–2025ನೇ ರವಿವಾರ ನಿಧನರಾದರು.

●●●




**ಮಾರ್ಪಳ್ಳಿ ಶ್ರೀ ಆರ್. ಸುಬ್ರಹ್ಮಣ್ಯ** (84) ತಾ. 26–01–2025ನೇ ರವಿವಾರ ನಿಧನ ಹೊಂದಿದರು. ಅವರು ಪತ್ನಿ, ನಾಲ್ವರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●




**ಕಾವು ನಿಧಿಮುಂಡ ಶ್ರೀ ರಾಜಾರಾಮ ರಾವ್** (80) ತಾ. 5–02–2025ನೇ ಬುಧವಾರ ನಿಧನ ಹೊಂದಿದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



**ಶ್ರೀ ರಘುರಾಮ ರಾವ್** (87) ತಾ. 31–01–2025ನೇ ಶುಕ್ರವಾರ ನಿಧನ ಹೊಂದಿದರು. ಅವರು ಓರ್ವ ಪುತ್ರ, ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.

●●●



**ಶ್ರೀ ಶಿವರಾಯ ಪರಮೇಶ್ವರ ಶಾನುಭೋಗ** (82) ತಾರೀಕು 26–01–2025ನೇ ರವಿವಾರ ನಿಧನರಾದರು. ಅವರು ಪತ್ನಿ, ಓರ್ವ ಪುತ್ರನನ್ನು ಅಗಲಿದ್ದಾರೆ.

●●●



**ಶ್ರೀ ಅಮೃತ ರಾವ್** (42) ಇವರು ಲಂಡನ್‌ನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



**ಶ್ರೀಮತಿ ಜಯಲಕ್ಷ್ಮೀ** (74) ತಾ. 22–01–2025ನೇ ಬುಧವಾರ ನಿಧನ ಹೊಂದಿದರು. ಅವರು ಪತಿಯನ್ನು ಅಗಲಿದ್ದಾರೆ.












# ಅಪಾರಕೀರ್ತಿ ಗಳಿಸಿ



ಕು। ಶರಣ್ಯ ಎಸ್. ರಾವ್ ಇವಳು ಶ್ರೀ ಶಾಂತಾರಾಮ್ ರಾವ್ ಹಾಗೂ ಶ್ರೀಮತಿ ರಮ್ಯಾ ಎಸ್. ರಾವ್ ಇವರ ಪುತ್ರಿಯಾಗಿದ್ದು ಶ್ರೀ ಶಾರದಾ ವಿದ್ಯಾಲಯ, ಮಂಗಳೂರು ಇಲ್ಲಿ 9ನೇ ತರಗತಿಯಲ್ಲಿ ವಿದ್ಯಾರ್ಥಿನಿಯಾಗಿದ್ದಾಳೆ.

ಪ್ರಸ್ತುತ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ನಡೆಸಿರುವ ಹೈಯರ್ ಗ್ರೇಡ್ ಡ್ರಾಯಿಂಗ್ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣಳಾಗಿರುತ್ತಾಳೆ.

ಹಾಗೆಯೇ, ದಕ್ಷಿಣ ಭಾರತ್ ಹಿಂದೀ ಪ್ರಚಾರ್ ಸಭಾ, ಮದ್ರಾಸ್ ಇವರು ನಡೆಸಿರುವ ಎಲ್ಲಾ 8 ಹಂತದ ಹಿಂದಿಪ್ರಚಾರ್ ಸಭಾ ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿ ರಾಷ್ಟ್ರಭಾಷಾ ಪ್ರವೀಣ ಎಂಬ ಪ್ರಮಾಣಪತ್ರ ಪಡೆದಿರುತ್ತಾಳೆ.

ಇವಳ ಈ ಸಾಧನೆಯು ಸ್ಥಾನಿಕ ಸಮಾಜಬಾಂಧವರೆಲ್ಲರೂ ಮೆಚ್ಚುವಂತದ್ದಾಗಿದೆ. ಇವಳ ಮುಂದಿನ ಭವಿಷ್ಯ ಉಜ್ವಲವಾಗಿರಲಿ. ಇನ್ನಷ್ಟು ಸಾಧನೆಗಳನ್ನು ಸಾಧಿಸುವ ಛಲವನ್ನು ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರು ಇವಳಿಗೆ ಕರುಣಿಸಲಿ ಎಂದು ನಮ್ಮೆಲ್ಲರ ಶುಭಹಾರೈಕೆ.

# ಶ್ರೀಮತಿ ಲಕ್ಷ್ಮೀ ಶಾನುಭೋಗ್ ಅವರಿಗೆ 'ಶ್ರೀಕೃಷ್ಣ ಗೀತಾನುಗ್ರಹ ಪ್ರಶಸ್ತಿ'



ಉಡುಪಿಯ ಪರ್ಯಾಯ ಶ್ರೀ ಪುತ್ತಿಗೆ ಮಠದ ಪ್ರಾಯೋಜಕತ್ವದಲ್ಲಿ ನಡೆಸುತ್ತಿರುವ 'ವಿಶ್ವಗೀತ ಪರ್ಯಾಯ 2024–2026' ಕಾರ್ಯಕ್ರಮದ ಸಂದರ್ಭದಲ್ಲಿ, ಭಗವದ್ಗೀತೆಯ ಪ್ರಸಾರಕ್ಕಾಗಿ ಹಲವು ವರ್ಷಗಳಿಂದ ಸೇವೆ ಸಲ್ಲಿಸಿದ ಶ್ರೀಮತಿ ಲಕ್ಷ್ಮೀ ಶಾನುಭೋಗ್, ಉಡುಪಿ ಇವರನ್ನು ಶ್ರೀ ಕೃಷ್ಣಮಠದ ರಾಜಾಂಗಣದಲ್ಲಿ 'ಶ್ರೀ ಕೃಷ್ಣಗೀತಾನುಗ್ರಹ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಇವರು ಕಾಸರಗೋಡಿನ ದಿ। ಆಲಂಪಾಡಿ ವೆಂಕಟೇಶ ಶಾನುಭೋಗರ ಹಿರಿಯ ಮಗಳು. ಪ್ರಸ್ತುತ ಉಡುಪಿಯಲ್ಲಿ ನೆಲೆಸಿದ್ದಾರೆ.

# ಕವಿ - ಕಲಾವಿದ ಶ್ರೀ ರಾಜೇಂದ್ರ ಕೇದಿಗೆ



ಶ್ರೀ ರಾಜೇಂದ್ರ ಕೇದಿಗೆ ಅವರು ಚಿತ್ರ ಕಲಾವಿದರು ಮಾತ್ರವಲ್ಲದೆ ಕನ್ನಡ ಮತ್ತು ತುಳು ಕವಿ ಕೂಡ ಹೌದು. ಇವರು ಚಿತ್ರಕಲೆಯಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿ ಗುರುತಿಸಿಕೊಂಡಿದ್ದಾರೆ. ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಆ್ಯಂಡ್ ಕಲ್ಚರಲ್ ಹೆರಿಟೇಜ್, ಮಂಗಳೂರು ಚಾಪ್ಟರ್ ಮತ್ತು ಆರ್ಟ್ ಕೆನರಾ ಟ್ರಸ್ಟ್‌ನ ಆಜೀವ ಸದಸ್ಯರಾಗಿದ್ದಾರೆ. ಕೊಡಿಯಾಲಗುತ್ತಿನ ಸೆಂಟರ್ ಫಾರ್ ಆರ್ಟ್ಸ್ ಆ್ಯಂಡ್ ಕಲ್ಚರ್‌ನಲ್ಲಿ ಗ್ಯಾಲರಿ ಎಸ್–ಕ್ಯೂಬ್‌ನ್ನು ನಡೆಸುತ್ತಿದ್ದು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ. ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಎರಡು ಅವಧಿಗೆ ಸೇವೆ ಸಲ್ಲಿಸಿದ್ದಾರೆ.

ಪತ್ರಿಕೆಗೆ ಶುಭ ಬಯಸುವ–



ಶ್ರೀ ಸೋಮಶೇಖರನ್

ಮತ್ತು

ಶ್ರೀಮತಿ ಅರುಣಾ ಸೋಮಶೇಖರನ್

ಚಿಲಿಂಬಿ, ಮಂಗಳೂರು



ಪ್ರಾಂಶುಪಾಲ ವೃತ್ತಿಯಿಂದ ನಿವೃತ್ತರಾಗುತ್ತಿರುವ

# ಪ್ರೊ. ಪಿ. ಕೃಷ್ಣಮೂರ್ತಿ

**ಗೋವಿಂದದಾಸ ಕಾಲೇಜು, ಸುರತ್ಕಲ್, ಮಂಗಳೂರು**

ಸುರತ್ಕಲ್‌ನ ಗೋವಿಂದದಾಸ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದ ನಮ್ಮ ಸಮಾಜದ ಅತ್ಯಂತ ಚಟುವಟಿಕೆಯ ಪ್ರೊ। ಪಿ. ಕೃಷ್ಣಮೂರ್ತಿ ಅವರು ದಿನಾಂಕ 31–01–2025ನೇ ಶುಕ್ರವಾರ ಸೇವಾ ನಿವೃತ್ತಿ ಹೊಂದಿರುವರು.

ಪಣಂಬೂರು ತಣ್ಣೀರುಬಾವಿ ದಿ। ಆನಂದ ರಾವ್ ಮತ್ತು ದಿ। ಗಂಧಿನಿ ದಂಪತಿಯ ಸುಪುತ್ರರಾದ ಇವರು ಸುರತ್ಕಲ್‌ನ ಹಿಂದೂ ವಿದ್ಯಾದಾಯಿನೀ ಸಂಘದ ವಿದ್ಯಾಸಂಸ್ಥೆಗಳಲ್ಲಿ ಹೈಸ್ಕೂಲ್‌ವರೆಗಿನ ವಿದ್ಯಾಭ್ಯಾಸ ಮಾಡಿ ಅನಂತರ ಗೋವಿಂದದಾಸ ಕಾಲೇಜಿನಲ್ಲಿ ಪಿ. ಯು. ಸಿ. ಮತ್ತು ಪದವಿ ಅಧ್ಯಯನ ಮುಗಿಸಿ ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಸ್ನಾತಕ ಪದವಿ (ಎಂ. ಎ.) ಗಳಿಸಿದ ಕೂಡಲೇ ಅವರು ವಿದ್ಯಾರ್ಜನೆಗೆ ಮಾಡಿದ ಗೋವಿಂದದಾಸ ಕಾಲೇಜಿನಲ್ಲಿ ಉಪನ್ಯಾಸಕರಾಗಿ ನೇಮಕಾತಿ ಹೊಂದಿದರು. ಕಾಲಕಾಲಕ್ಕೆ ಪದೋನ್ನತಿ ಪಡೆದು ಪ್ರೊಫೆಸರ್ ಹಾಗೂ 2020ರಲ್ಲಿ ಪ್ರಾಂಶುಪಾಲರಾದರು. ಸುಮಾರು ಮೂರು ದಶಕಕ್ಕೂ ಮಿಕ್ಕಿ ಪ್ರಾಧ್ಯಾಪಕ ವೃತ್ತಿಯಲ್ಲಿದ್ದು ಇದೀಗ ಸೇವಾ ನಿವೃತ್ತಿ ಹೊಂದಿದ್ದಾರೆ.

ಪ್ರೊ। ಕೃಷ್ಣಮೂರ್ತಿ ಅವರ ಸುದೀರ್ಘವಾದ ಅಧ್ಯಾಪನ ವೃತ್ತಿಜೀವನದಲ್ಲಿ ಅದರಲ್ಲೂ ಪ್ರಾಂಶುಪಾಲರಾಗಿ ಆಡಳಿತ ಮಂಡಳಿಯ ಒಲವಿಗೆ ಪಾತ್ರರಾಗಿದ್ದು ಕಾಲೇಜಿನ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಕಾಲೇಜಿನ ಅಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳೊಂದಿಗೆ ಸೌಹಾರ್ದಯುತ ಸಂಬಂಧ ಬೆಳೆಸಿಕೊಂಡು, ಶೈಕ್ಷಣಿಕ ಮತ್ತು ಶಿಕ್ಷಣೇತರ ಚಟುವಟಿಕೆಗಳಿಗೆ ಸದಾ ಪ್ರೋತ್ಸಾಹ ಕೊಟ್ಟು ತನ್ನ ಕಾಲೇಜು ಜಿಲ್ಲೆಯಲ್ಲೇ ಶ್ರೇಷ್ಠ ಕಾಲೇಜ್ ಎಂಬ ಹೆಗ್ಗಳಿಕೆ ಗಳಿಸಿದರು. ವಿದ್ಯಾರ್ಥಿ, ಅಧ್ಯಾಪಕರು ಮಾತ್ರವಲ್ಲದೆ ಮಕ್ಕಳ ಹೆತ್ತವರು ಹಾಗೂ ಸಮಾಜದ ಗಣ್ಯರೊಂದಿಗೂ ಸೌಹಾರ್ದ ಸಂಬಂಧ ಇಟ್ಟುಕೊಂಡು ಸಂಸ್ಥೆಯ ಬಗ್ಗೆ ಅಭಿಮಾನ ಬೆಳೆಸಿದರು. ಇವರ ಕಾರ್ಯ ಚಟುವಟಿಕೆಗಳಿಂದ ಇವರೊಬ್ಬರು ಅಪ್ರತಿಮ ಪ್ರತಿಭಾವಂತ ಸ್ಥಾನಿಕ ಎಂಬುದರಲ್ಲಿ ಸಂದೇಹವಿಲ್ಲ. ನನ್ನ ಸಹೋದ್ಯೋಗಿಯಾಗಿದ್ದ ಇವರು ಇದೀಗ ನಿವೃತ್ತರಾಗಿದ್ದು ಅವರ ನಿವೃತ್ತ ಜೀವನ ಸದಾ ಚಟುವಟಿಕೆಯಿಂದ ಆರೋಗ್ಯಕರವಾಗಿ ಸುಖ–ಶಾಂತಿ ನೆಮ್ಮದಿಯಿಂದ ಕೂಡಿರಲೆಂದು ಹಾರೈಸುತ್ತೇನೆ.

***ಪಾದೆಬೆಟ್ಟು ಸೋಮಶೇಖರ ರಾವ್, ಬೆಂಗಳೂರು***

*Manish Rao U.*

Tel : (O) 2223301
Mobile : 9448726499 / 8884284939

NAVA COMPUTERS



Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services

1st Floor, Bharath Building, P. M. Rao Road, Hampankatta, Mangaluru - 575 001

ಪತ್ರಿಕೆಗೆ ಶುಭ ಬಯಸುವ–

ಮೊಬೈಲ್ : 9972989678
9448104174

**ರವಿಕಿರಣ್ ಕ್ಯೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

PRAVEEN KUMAR ADYAPADY
NOTARY & ADVOCATE

| MANGALORE OFFICE | BAJPE OFFICE |
| --- | --- |
| JANVI PLAZA, IInd FLOOR | OZANAM COMPLEX, IInd FLOOR |
| BUNTS HOSTEL, MANGALORE | CHURCH BUILDING, MAIN ROAD, BAJPE |

0824 - 2254478 (O) 9620392584, 9448724981(M), 2254448 (R)

We undertakes : Civil, Criminal, Motor Vehicles, A.C., D.C. Cases, Land Conversion, Registration etc.

## 'ಶಿವಸದನ'ದ ಶ್ರೇಯೋಭಿಲಾಷಿಯ ಪ್ರಾಯೋಜಕತ್ವದಲ್ಲಿ ಶ್ರೀಮತಿ ಉಷಾ ನರೇಶ್ ಅವರಿಂದ 'ಶ್ರೀರಾಮ ಪಟ್ಟಾಭಿಷೇಕ' – ಹರಿಕಥಾ ಸಂಕೀರ್ತನೆ





'ಶಿವಸದನ'ದಲ್ಲಿ ಓರ್ವ ಶ್ರೇಯೋಭಿಲಾಷಿ ಪ್ರತಿ ವರ್ಷದಂತೆ ಎಲ್ಲರ ಹುಟ್ಟುಹಬ್ಬವನ್ನು ಹಿರಿಯರೊಂದಿಗೆ ವಿಶೇಷ ಭೋಜನವನ್ನೂ ಪ್ರಾಯೋಜಿಸಿದರು. ಆ ದಿನ 'ಶ್ರೀರಾಮ ಪಟ್ಟಾಭಿಷೇಕ' ಎಂಬ ಹರಿಕಥಾ ಸಂಕೀರ್ತನೆಯನ್ನು ಶ್ರೀಮತಿ ಉಷಾ ನರೇಶ್ ರಾವ್ ನಡೆಸಿಕೊಟ್ಟರು.

ಇವರು ಬಜ್ಪೆ ಡಾ। ಭಾಸ್ಕರ್ ರಾವ್ ಮತ್ತು ಶ್ರೀಮತಿ ರತ್ನ ಬಿ. ರಾವ್ ಇವರ ಸೊಸೆ ಹಾಗೂ ಡಾ. ನರೇಶ್ ರಾವ್ ಇವರ ಪತ್ನಿ. ಇವರು ಖ್ಯಾತ ಹರಿಕಥಾ ವಿದುಷಿ ಬಾಲಭಾರತಿ ಪದ್ಮಾವತಿ ಶಿವರಾಮ್ ಇವರ ಮೊಮ್ಮಗಳು.

ಇವರು ತನ್ನ ಉತ್ತಮವಾದ ಮಾತಿನ ಶೈಲಿ, ಶ್ರುತಿಬದ್ಧವಾದ ಹಾಡುಗಾರಿಕೆ, ಕಥಾನಿರೂಪಣೆಯ ಶೈಲಿ, ಉಪಕಥೆಗಳು ಹಾಗೂ ಅವರೊಂದಿಗೆ ತಬಲಾದಲ್ಲಿ ಮಾಸ್ಟರ್ ಯತೀಶ್ ಸೂರಿಕುಮೇರು ಮತ್ತು ಹಾರ್ಮೋನಿಯಂನಲ್ಲಿ ಶ್ರೀ ಓಂಪ್ರಕಾಶ್ ಸಾಥ್ ನೀಡಿದರು. ಆ ದಿನದ ಕಾರ್ಯಕ್ರಮದಲ್ಲಿ ಶ್ರೀ ಕರುಣ್ ರಾವ್ ಬೆಳ್ಳೆ, ಶ್ರೀ ಶ್ರೀಪತಿ ರಾವ್ ದಂಪತಿಗಳು, ಶ್ರೀ ಸತ್ಯನಾರಾಯಣ ರಾವ್, ಶ್ರೀಮತಿ ವನಿತಾ ರಾವ್, ಸದನದ ಶ್ರೀಮತಿ ಶಕುಂತಲಾ ವಿ. ರಾವ್, ರತ್ನ ರಾಜೇಂದ್ರ, ಕವಿತ ರಾವ್, ಶ್ರೀಮತಿ ಸುಮನ ರಾವ್, ಶ್ರೀಮತಿ ಸುಶೀಲಾ ರಾವ್, ಸಿಬ್ಬಂದಿ ವರ್ಗ, ಸ್ಪೆಶಲ್ ಸ್ಕೂಲ್ ಟೀಚರ್ಸ್, ಪುತ್ತೂರಿನ ಹಿತೈಷಿಯವರೆಲ್ಲ ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದರು. ಎಲ್ಲರಿಗೂ ವೀಡಿಯೋ ಮುಖಾಂತರ ಮನೆ–ಮನೆಗೆ ಸಂಪರ್ಕ ಮಾಡಲು ಸಹಕರಿಸುವ ನೆಚ್ಚಿನ ಕುಮಾರಿ ಡಾ. ಗಾನ ಪಿಲಿಂಜ ಮತ್ತು ಎಲ್ಲರಿಗೂ ಮನದಾಳದ ಕೃತಜ್ಞತೆಗಳು.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*



## 'ಶಿವಸದನ'ದಲ್ಲಿ ಶ್ರೀಮತಿ ವೇದ ಟೀಚರ್ ಅವರ 80ರ ಸಂಭ್ರಮ

'ಶಿವಸದನ' ನಿವಾಸಿ ಶ್ರೀಮತಿ ವೇದ ಟೀಚರ್ ಅವರ 80ನೆಯ ವರ್ಷದ ಹುಟ್ಟುಹಬ್ಬದ ನಿಮಿತ್ತ ಅಲ್ಲಿನ ಎಲ್ಲಾ ನಿವಾಸಿಗಳೊಂದಿಗೆ ವಿಶೇಷ ಭೋಜನವನ್ನು ಪ್ರಾಯೋಜಿಸಿದ್ದರು.

ಪುತ್ತೂರು 'ಶಿವಸದನ'ಕ್ಕೆ ಮೊತ್ತಮೊದಲು ದಾಖಲಾಗಿರುವ ಇವರು ಉಡುಪಿ ತಾಲೂಕಿನ ಮಟ್ಟು ಎಂಬಲ್ಲಿ ಜನಿಸಿದರು. ಆರು ಜನ ತಮ್ಮ–ತಂಗಿಯರೊಂದಿಗೆ ಒಡನಾಡಿದ ಇವರು ವೃತ್ತಿಯಲ್ಲಿ ಅಧ್ಯಾಪಿಕೆಯಾಗಿ ನಂದಳಿಕೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವರು.

ಕಾರ್ಯಕ್ರಮದ ಮೊದಲಿಗೆ ವಿಶೇಷಚೇತನ ಶಾಲೆಯ ಅಧ್ಯಾಪಿಕೆಯರು ಮಕ್ಕಳೊಂದಿಗೆ, ಸಿಬ್ಬಂದಿ ವರ್ಗದವರು ಭಜನೆ ಹಾಡುವುದರ ಮೂಲಕ ಆರಂಭವಾಯಿತು. ಆಟಗಳಲ್ಲಿ ಹಿರಿಯರೆಲ್ಲರೂ ಉತ್ಸಾಹದಿಂದ ಪಾಲ್ಗೊಂಡರು. ಶ್ರೀ ಕರುಣ್ ರಾವ್ ಬೆಳ್ಳೆಯವರು ವೇದ ಟೀಚರ್ ಅವರ ಹಿಂದಿನ ಜೀವನದ ಪರಿಚಯ ಮಾಡಿಸಿದರು.

ಶ್ರೀಮತಿ ಮೀರಾ ಶಾಸ್ತ್ರಿ ಮತ್ತು ಶ್ರೀಮತಿ ಗಾಯತ್ರಿ ಪಿಲಿಂಜ ಇವರು ಆರತಿ ಬೆಳಗಿದರು. ಶ್ರೀಮತಿ ಶಕುಂತಲಾ ವಿಜಯಕುಮಾರ್ ಅವರು ಹುಟ್ಟುಹಬ್ಬದ ಹಾಡನ್ನು ಸುಶ್ರಾವ್ಯವಾಗಿ ಹಾಡಿದರು. ಬೆಳ್ಳೆಯವರು ಪ್ರೀತಿಯಿಂದ ಮನೆಯಲ್ಲಿ ತಯಾರಿಸಿದ 'ಹಾಲುಬಾಯಿ'ಯನ್ನು ಕತ್ತರಿಸಿ ಎಲ್ಲರಿಗೂ ಹಂಚಲಾಯಿತು. ಅಲ್ಲಿದ್ದ ಪ್ರತಿಯೊಬ್ಬರೂ ಅವರಿಗೆ ಸ್ವತಃ ಶುಭಾಶಯಗಳನ್ನು ಹೇಳಿದಾಗ ವೇದಕ್ಕನವರಿಗೆ ಹೃದಯ ಭಾರವಾಗಿ ಕಣ್ಣುತುಂಬಿ ಬಂದು ಮಾತು ಹೊರಡದಾಯಿತು. ಎಲ್ಲರಿಗೂ ಕೃತಜ್ಞತೆ ಸಲ್ಲಿಸಿ ದೇವರಲ್ಲಿ ಆರೋಗ್ಯಕ್ಕಾಗಿ ಪ್ರಾರ್ಥಿಸಿದರು.

ದೇವಸ್ಥಾನದಲ್ಲಿ ಅವರಿಗಾಗಿ ಪೂಜೆಮಾಡಿ ಪ್ರಸಾದವನ್ನು ತಂದುಕೊಟ್ಟ ಶ್ರೀ ಸತ್ಯನಾರಾಯಣ ರಾವ್ ದಂಪತಿಗಳು, ಶ್ರೀ ಶ್ರೀಪತಿ ರಾವ್ ದಂಪತಿಗಳು ಮತ್ತು ಶ್ರೀ ಮೋಹನ್ ದಾಸ್ ಪಿಲಿಂಜ ದಂಪತಿಗಳು ಹಾಗೂ ಪುತ್ತೂರಿನ ಆತ್ಮೀಯರೂ, ಸಿಬ್ಬಂದಿಗಳೆಲ್ಲರೂ ಸಂತೋಷದಿಂದ ಭೋಜನ ಬಡಿಸಲು ಸಹಕರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಮೋಹನ್ ದಾಸ್ ಪಿಲಿಂಜ ಇವರು ಶಿವಸದನಕ್ಕೆ 100 ಸ್ಟೀಲ್ ಲೋಟಗಳನ್ನು ನೀಡಿದರು ಮತ್ತು ಶ್ರೀಮತಿ ಶಾರದಾ ಯಸ್. ರಾವ್, ಶ್ರೀಮತಿ ಲಕ್ಷ್ಮೀ ಅಮ್ಮ, ಶ್ಯಾಮಲ ಟೀಚರ್ ಆಗಮಿಸಿದ್ದು, ಎಲ್ಲರಿಗೂ ಹಣ್ಣುಗಳನ್ನೂ ವಿತರಿಸಿದರು.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

Prop: Somashekhar
Mob: 9844551244
WONDER CREATION
Decor & Event planners
Our Services :-
- Corporate Events
- All Types Of Stage Decoration
- Sounds And Lights
- Led Wall Rentals
- Selfie Booth Concept
- Shamiyana/Tint Sheet/Plat Form Chairs/Round Table etc....
- Photography & Videography
2T-145-3A, Kulai Gudde Road, Kulai, Surathkal

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)



ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್

ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works



# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಕೋಲರ್ಸ್ ಡೇ - 2025



**ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ನಡೆಸಲ್ಪಡುವ 'ಸ್ಕೋಲರ್ಸ್ ಡೇ' ಕಾರ್ಯಕ್ರಮವು ಫೆಬ್ರವರಿ 2ರಂದು ಶ್ರೀ ಸುಬ್ರಹ್ಮಣ್ಯ ಸಭಾದ ಸಭಾಂಗಣದಲ್ಲಿ ನೆರವೇರಿತು.**

ಕು। ಶರಣ್ಯರವರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮವು ಆರಂಭವಾಯಿತು. ಕಾರ್ಯಕ್ರಮವನ್ನು ಕೆನ್ ಮೆಟಲ್ ಇಂಡಿಯಾ ಲಿಮಿಟೆಡ್ ಇದರ ಮಾಜಿ ಮ್ಯಾನೇಜಿಂಗ್ ಡೈರೆಕ್ಟರ್ ಆದ ಶ್ರೀ ಭಾಗ್ಯಚಂದ್ರ ರಾವ್, ಶ್ರೀ ಇನ್ನ ಚಂದ್ರಕಾಂತ ರಾವ್ ಹಾಗೂ ಶ್ರೀ ಸಭಾದ ಅಧ್ಯಕ್ಷರು ಡಾ. ಎ. ಪಿ. ಕೃಷ್ಣ ಇವರು ದೀಪಪ್ರಜ್ವಲನೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಸಭಾದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಉದಯ್ ಕುಮಾರ್ ರಾವ್ ಪಿ., ಖಜಾಂಚಿ ಶ್ರೀ ಪಿ. ಶ್ರೀಕಾಂತ್ ರಾವ್ ಉಪಸ್ಥಿತರಿದ್ದರು. ಶ್ರೀ ಸಭಾದ ಶೈಕ್ಷಣಿಕ ಸಮಿತಿಯ ಅಧ್ಯಕ್ಷ ಡಾ. ಎ. ಪಿ. ಕೃಷ್ಣ ಇವರು ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು. ತದನಂತರ ಶ್ರೀಮತಿ ಸುಮಂಗಲಾ ಪ್ರಭಾಕರ್ ಅವರು ಪ್ರಧಾನ ಭಾಷಣಕಾರರಾದ ಶ್ರೀ ಭಾಗ್ಯಚಂದ್ರ ರಾವ್ ಅವರನ್ನು ಸಭೆಗೆ ಪರಿಚಯಿಸಿದರು.

ಅನಂತರ ಶ್ರೀ ಭಾಗ್ಯಚಂದ್ರ ರಾವ್ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ, 'ಇಂಡಿಯಾ ಇಸ್ ಶೈನಿಂಗ್–ಯುವರ್ ಸ್ವೀಟ್ ಸ್ಪಾಟ್ ಆನ್ ಆಪರ್ಚುನಿಟೀಸ್' ಎಂಬ ವಿಷಯದ ಬಗ್ಗೆ ಮಾತನಾಡುತ್ತಾ ಯುವಜನರಿಗೆ ಶಿಸ್ತು, ಜ್ಞಾನ, ಸಂವಹನ ಕೌಶಲ್ಯವೂ ಅತಿ ಪ್ರಾಮುಖ್ಯವಾದದ್ದು ಎಂದು ಕೂಲಂಕುಶವಾಗಿ ತಿಳಿಸಿದರು. ಯುವಕರಿಗೆ ಈಗಿನ ಪ್ರಪಂಚದಲ್ಲಿ ಬೇಕಾದಷ್ಟು ಅವಕಾಶಗಳಿವೆ ಮತ್ತು ಸೌಲಭ್ಯಗಳಿವೆ, ಅದನ್ನು ನಮ್ಮದಾಗಿಸಬೇಕಾಗಿದೆ ಎಂದು ತಿಳಿಸಿದರು.

CA. ನಾಗರಾಜ ಶರ್ಮ ಇವರು ಪ್ರಧಾನ ಭಾಷಣಕಾರರಾದ ಶ್ರೀ ಧನಂಜಯ್ ರಾವ್, ಹಿರಿಯ ವಕೀಲರನ್ನು ಸಭೆಗೆ ಪರಿಚಯಿಸಿದರು. ಮುಖ್ಯ ಅತಿಥಿಗಳಾದ ಶ್ರೀ ಧನಂಜಯ್ ರಾವ್, ಇವರು 'ನಮ್ಮ ನಡೆ ಯಶಸ್ಸಿನೆಡೆಗೆ' ಎಂಬ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಮಾತುಗಳಿಂದ ಬದುಕಿನ ಯಶಸ್ಸು ಮತ್ತು ಸಂತೋಷದ ಅರಿವಾಗುವುದು ಕಷ್ಟಗಳನ್ನು ಅನುಭವಿಸಿದಾಗಲೇ, ಮನುಷ್ಯನಿಗೆ ಅರ್ಥವಾಗುವುದು. ವಿದ್ಯಾರ್ಥಿಗಳೊಂದಿಗೆ ಚಟುವಟಿಕೆ ಆಧಾರಿತ ಚರ್ಚೆ ಮಾಡುತ್ತಾ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಾ, ಯಶಸ್ಸು ಹೇಗೆ ಸಾಧಿಸುವುದು ಎಂದು ಹಲವಾರು ಚಟುವಟಿಕೆ ಮೂಲಕ ಮನವರಿಕೆ ಮಾಡಿಕೊಟ್ಟರು.

ಸಮೂಹಚರ್ಚಾ ಕಾರ್ಯಕ್ರಮವನ್ನು ಶ್ರೀ ಇನ್ನ ಚಂದ್ರಕಾಂತ ರಾವ್ ಇವರು ನೆರವೇರಿಸಿಕೊಟ್ಟರು. ಶ್ರೀಮತಿ ಅಖಿಲಾ ಮತ್ತು ಶ್ರೀ ಅಶ್ವತ್ ದಂಪತಿಯ ಪುತ್ರಿಯಾದ ಕು। ಅದ್ವಿತಿ ರಾವ್, ಬೆಳ್ತಂಗಡಿ ಇವಳು ತಮ್ಮ ಎಳೆಯ ವಯಸ್ಸಿನಲ್ಲಿ ಭಗವದ್ಗೀತೆಯ 18 ಅಧ್ಯಾಯದ 700 ಶ್ಲೋಕಗಳನ್ನು ಕಂಠಪಾಠ ಮಾಡಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯನ್ನು ಪಡೆದು, ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಗುರುಗಳ ಆಶೀರ್ವಾದವನ್ನು ಪಡೆದಿರುತ್ತಾಳೆ. ಗೀತಾ ಪರಿವಾರದ 18 ಅಧ್ಯಾಯದ ಕಂಠಪಾಠ ಪರೀಕ್ಷೆ ಗೀತಾವ್ರುತಿಯಲ್ಲಿ 600ರಲ್ಲಿ 600 ಅಂಕವನ್ನು ಗಳಿಸಿರುತ್ತಾಳೆ.

ಈ ಸಾಧನೆಯನ್ನು ಗುರುತಿಸಿ, ಇವರನ್ನು ಶ್ರೀ ಸಭಾದ ವತಿಯಿಂದ ಸನ್ಮಾನಿಸಲಾಯಿತು. ಶ್ರೀ ಕೆ. ಪ್ರಭಾಕರ್ ರಾವ್ ಸನ್ಮಾನಿತರನ್ನು ಸಭೆಗೆ ಪರಿಚಯಿಸಿದರು. ಪ್ರತಿಭಾವಂತ ವಿದ್ಯಾರ್ಥಿನಿ ಕು। ಅಪೇಕ್ಷಾರವರ ಪೂರ್ತಿ ವಿದ್ಯಾಭ್ಯಾಸದ ಖರ್ಚನ್ನು ಶ್ರೀಮತಿ ಅಂಕಿತ ಅನಂತಪುರ ಅವರು ಪ್ರಾಯೋಜಿಸಿರುತ್ತಾರೆ. ಅವರ ಚೆಕ್ಕನ್ನು ಶ್ರೀಮತಿ ಸುಮನ್‌ಕೃಷ್ಣ ಇವರು ಹಸ್ತಾಂತರಿಸಿದರು.

ಡಾ. ಎ. ಪಿ. ಕೃಷ್ಣರವರು ಸ್ಕಾಲರ್‌ಶಿಪ್ ನೀಡುತ್ತಾ ಒಟ್ಟು 114 ವಿದ್ಯಾರ್ಥಿಗಳು ಇದರ ಫಲಾನುಭವಿಗಳಾಗಿರುತ್ತಾರೆ. ಇವರೆಲ್ಲರಿಗೆ ಒಟ್ಟು ರೂ. 5,31,500/– ವಿತರಿಸಲಾಗಿದೆ. ಇದರಲ್ಲಿ ವಿಶೇಷವಾಗಿ ವೇದ ಮತ್ತು ಸಂಸ್ಕೃತ ಕಲಿಕೆಯನ್ನು ಉತ್ತೇಜಿಸಲು ವಿದ್ಯಾರ್ಥಿ ವೇತನ ನೀಡಲಾಗಿದೆ. 70 ವಿದ್ಯಾರ್ಥಿಗಳಿಗೆ ರೂ. 71,80,000/– ಸಾಲ ವಿದ್ಯಾರ್ಥಿ ವೇತನ ನೀಡಲಾಗಿದೆ ಎಂದು ತಿಳಿಸಿದರು. 11 ವಿದ್ಯಾರ್ಥಿಗಳಿಗೆ ರೂ. 1,80,000/– ಮೌಲ್ಯದ ಲ್ಯಾಪ್‌ಟಾಪನ್ನು ವಿತರಿಸಲಾಯಿತು.

ಯುವವೇದಿಕೆ ಅಧ್ಯಕ್ಷ ಶ್ರೀ ಅನಿಲ್ ಕುಮಾರ್ ನೆಲ್ಲಿಕುಂಜ ಇವರು ಸ್ಕಾಲರ್‌ಶಿಪ್ ವಿತರಣಾ ಕಾರ್ಯಕ್ರಮವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಚೆಕ್ಕನ್ನು ಫಲಾನುಭವಿಗಳಿಗೆ, ದಾನಿಗಳ ಮೂಲಕ ಹಸ್ತಾಂತರಿಸಲಾಯಿತು.

CA. ನಾಗರಾಜ ಶರ್ಮರವರು ಕಾರ್ಯಕ್ರಮವನ್ನು ನಿರೂಪಿಸಿ ಧನ್ಯವಾದವನ್ನು ಸಮರ್ಪಿಸಿದರು. ಶ್ರೀ ಸಭಾದ ನಿರ್ದೇಶಕರಾದ ಶ್ರೀ ರಘುವೀರ್ ರಾವ್ ಪೆರ್ಡೂರು ಅವರು ಅತ್ಯುತ್ತಮ ಫೋಟೋ ಮತ್ತು ವಿಡಿಯೋವನ್ನು ಒದಗಿಸಿ ಸಹಕರಿಸಿದರು.










ಪ್ರತಿಭಾವಂತ ವಿದ್ಯಾರ್ಥಿನಿ ಕು। ಅಪೇಕ್ಷಾರವರ ಪೂರ್ತಿ ವಿದ್ಯಾಭ್ಯಾಸದ ಖರ್ಚನ್ನು ಶ್ರೀಮತಿ ಅಂಕಿತ ಅನಂತಪುರ ಅವರು ಪ್ರಾಯೋಜಿಸಿರುತ್ತಾರೆ. ಅವರು ನೀಡಿದ ಚೆಕ್ಕನ್ನು ಶ್ರೀಮತಿ ಸುಮನ್ ಕೃಷ್ಣರವರು ಶ್ರೀ ಸುಬ್ರಹ್ಮಣ್ಯ ಸಭಾದ 'ಸ್ಕಾಲರ್ಸ್ ಡೇ' ದಿನದಂದು ಹಸ್ತಾಂತರಿಸಿದರು.





# ಶ್ರೀ ಸಭಾದ ವತಿಯಿಂದ ವಿದ್ಯಾರ್ಥಿ ಸಹಾಯನಿಧಿ ಹಾಗೂ ಲ್ಯಾಪ್‌ಟಾಪ್‌ಗಳ ಕೊಡುಗೆ

'ಸ್ಕೋಲರ್ಸ್ ಡೇ' ದಿನದಂದು ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ 114 ವಿದ್ಯಾರ್ಥಿಗಳಿಗೆ ಒಟ್ಟು ₹ 5,31,500/- ಸ್ಕಾಲರ್‌ಶಿಪ್ ವಿತರಿಸಲಾಗಿದೆ. ಇದರಲ್ಲಿ ವಿಶೇಷವಾಗಿ ವೇದ ಮತ್ತು ಸಂಸ್ಕೃತ ಕಲಿಕೆಯನ್ನು ಉತ್ತೇಜಿಸಲು ವಿದ್ಯಾರ್ಥಿವೇತನ ನೀಡಲಾಗಿದೆ. 70 ವಿದ್ಯಾರ್ಥಿಗಳಿಗೆ ₹ 71,80,000/- ಸಾಲ ವಿದ್ಯಾರ್ಥಿವೇತನ ನೀಡಲಾಗಿದೆ ಹಾಗೂ 11 ವಿದ್ಯಾರ್ಥಿಗಳಿಗೆ ₹ 1,80,000/- ಮೌಲ್ಯದ ಲ್ಯಾಪ್‌ಟಾಪನ್ನು ವಿತರಿಸಲಾಗಿದೆ.




ಚಿತ್ರ : ಶ್ರೀ ರಘುವೀರ್ ಪೆರ್ಡೂರು






Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3
*Editor :* Sri M. S. Raghunath Rao, Darbe, Puttur *Printed at :* Rajesh Power Press, Darbe - 574 202, Puttur, D. K.